
# ಪ್ರಾರ್ಥನೆ

## ತೋಟಕಾಷ್ಟಕಮ್



**ವಿದಿತಾಖಿಲಶಾಸ್ತ್ರಸುಧಾಜಲಧೇ**
**ಮಹಿತೋಪನಿಷತ್ಕಥಿತಾರ್ಥನಿಧೇ ।**
**ಹೃದಯೇ ಕಲಯೇ ವಿಮಲಂ ಚರಣಂ**
**ಭವ ಶಂಕರದೇಶಿಕ ಮೇ ಶರಣಮ್ ॥ ೧ ॥**

ಸಕಲ ಶಾಸ್ತ್ರಗಳ ಸಾರಾಮೃತವನ್ನು ತಿಳಿದ ಜ್ಞಾನನಿಧಿಯೆ, ಮಹಿಮಾನ್ವಿತವಾದ ಉಪನಿಷತ್ತುಗಳ ಅರ್ಥವನ್ನು ಲೋಕಕ್ಕೆ ತಿಳಿಯಪಡಿಸಿದ ನಿನ್ನ ನಿರ್ಮಲವಾದ ಚರಣವನ್ನು ನನ್ನ ಹೃದಯದಲ್ಲಿ ಧ್ಯಾನಿಸುವೆನು. ಶಂಕರ ಗುರುವರನೆ, ನೀನೇ ನನಗೆ ಆಸರೆ.

**ಕರುಣಾವರುಣಾಲಯ ಪಾಲಯ ಮಾಂ**
**ಭವಸಾಗರದುಃಖವಿದೂನಹೃದಮ್ ।**
**ರಚಯಾಖಿಲದರ್ಶನತತ್ತ್ವವಿದಂ**
**ಭವ ಶಂಕರದೇಶಿಕ ಮೇ ಶರಣಮ್ ॥ ೨ ॥**

ಕರುಣಾಸಾಗರನೇ, ಭವಸಾಗರದ ದುಃಖದಿಂದ ನಲುಗಿ ಹೋದ ಹೃದಯವುಳ್ಳ ನನ್ನನ್ನು ರಕ್ಷಿಸು. ನನ್ನನ್ನು ಸರ್ವದರ್ಶನಗಳ ತತ್ತ್ವವನ್ನು ಬಲ್ಲವನನ್ನಾಗಿ ಮಾಡು. ಶ್ರೇಷ್ಠ ಮಾರ್ಗದರ್ಶಕ ಶಂಕರನೇ, ನೀನೇ ನನಗೆ ಆಸರೆ.

**ಭವತಾ ಜನತಾ ಸುಹಿತಾ ಭವಿತಾ**
**ನಿಜಬೋಧವಿಚಾರಣಚಾರುಮತೇ ।**
**ಕಲಯೇಶ್ವರಜೀವವಿವೇಕಮಿದಂ**
**ಭವ ಶಂಕರದೇಶಿಕ ಮೇ ಶರಣಮ್ ॥ ೩ ॥**

ಜನತೆಯ ಹಿತಕ್ಕಾಗಿ ಶ್ರಮಿಸುತ್ತಿರುವ ನಿನ್ನಿಂದ ಲೋಕಹಿತವುಂಟಾಗುವುದು. ನಮ್ಮ ಮೂಲಸ್ವರೂಪವನ್ನು ಮಂಥಿಸಿದ ಸುಂದರ ಬುದ್ಧಿಯುಳ್ಳ ಗುರುವೆ, ಜೀವ ಹಾಗೂ ಈಶ್ವರದ ನಡುವಿನ ಅಂತರ್ಯವನ್ನರಿತ ನಿನ್ನನ್ನು ಕುರಿತು ಚಿಂತಿಸುವೆನು. ಶಂಕರ ಗುರುವರನೆ, ನೀನೇ ನನಗೆ ಆಸರೆ.

**ಭವ ಏವ ಭವಾನಿತಿ ಮೇ ನಿತರಾಂ**
**ಸಮಜಾಯತ ಚೇತಸಿ ಕೌತುಕಿತಾ ।**
**ಮಮ ವಾರಯ ಮೋಹಮಹಾಜಲಧಿಂ**
**ಭವ ಶಂಕರದೇಶಿಕ ಮೇ ಶರಣಮ್ ॥ ೪ ॥**

ನೀನು ಸಾಕ್ಷಾತ್ ಶಂಕರ(ಶಿವ)ನೇ ಎಂದು ನನ್ನ ಮನದಲ್ಲಿ ಸುದೃಢವಾದ ಭಾವನೆ ಇದೆ. ನನ್ನ ಮೋಹಮಹಾಸಾಗರವನ್ನು ದೂರ ಮಾಡು. ಶಂಕರನೆ, ನೀನೇ ನನಗೆ ಆಸರೆ.

**ಸುಕೃತೇಽಧಿಕೃತೇ ಬಹುಧಾ ಭವತೋ**
**ಭವಿತಾ ಸಮದರ್ಶನಲಾಲಸತಾ ।**
**ಅತಿ ದೀನಮಿಮಂ ಪರಿಪಾಲಯ ಮಾಂ**
**ಭವ ಶಂಕರದೇಶಿಕ ಮೇ ಶರಣಮ್ ॥ ೫ ॥**

ಪುಣ್ಯದಲ್ಲಿ ಅಧಿಕೃತರಾದವರಿಗೆ ಮಾತ್ರ ನಿನ್ನ ದರ್ಶನವನ್ನು ಪಡೆಯಬೇಕೆಂಬ ತೀವ್ರವಾದ ಹಂಬಲವುಂಟಾಗುತ್ತದೆ. ಶಂಕರ ದೇಶಿಕನೇ, ಅತ್ಯಂತ ದೀನನಾದ ನನ್ನನ್ನು ರಕ್ಷಿಸು . ನೀನೇ ನನಗೆ ಆಸರೆ.

**ಜಗತೀಮವಿತುಂ ಕಲಿತಾಕೃತಯೋ**
**ವಿಚರಂತಿ ಮಹಾಮಹ ಸಚ್ಛಲತಃ ।**
**ಅಹಿಮಾಂಶುರಿವಾತ್ರ ವಿಭಾಸಿ ಗುರೋ**
**ಭವ ಶಂಕರದೇಶಿಕ ಮೇ ಶರಣಮ್ ॥ ೬ ॥**

ಜಗತ್ತನ್ನು ರಕ್ಷಿಸಲಿಕ್ಕಾಗಿ ಅನೇಕ ಲೀಲೆಗಳನ್ನು ಮಾಡುತ್ತಾ ನೀನು ಮಹಾ ತೇಜಸ್ವಿ ಜನರ ರೂಪದಲ್ಲಿ ಸಂಚರಿಸುತ್ತಿರುವೆ. ತಲೆಯಲ್ಲಿ ಚಂದ್ರನಿಲ್ಲ ಎಂಬುದೊಂದನ್ನು ಬಿಟ್ಟರೆ ನೀನು ಸಾಕ್ಷಾತ್ ಶಂಕರನೇ ಆಗಿರುವೆ. ನೀನೇ ನನಗೆ ಆಸರೆ.

**ಗುರುಪುಂಗವ ಪುಂಗವಕೇತನ ತೇ**
**ಸಮತಾಮಯತಾಂ ನ ಹಿ ಕೋಽಪಿ ಸುಧೀಃ ।**
**ಶರಣಾಗತವತ್ಸಲ ತತ್ತ್ವನಿಧೇ**
**ಭವ ಶಂಕರದೇಶಿಕ ಮೇ ಶರಣಮ್ ॥ ೭ ॥**

ಗುರುಗಳಲ್ಲಿ ಶ್ರೇಷ್ಠನೆ, ಶ್ರೇಷ್ಠರಾದವರ ಮುಂದಾಳು ನೀನು. ಯಾವ ಜ್ಞಾನಿಯೂ ನಿನ್ನ ಸಮಾನರಾಗಲಾರರು. ಶರಣಾಗತ ವತ್ಸಲನೆ, ತತ್ತ್ವಗಳ ನಿಧಿಯೇ, ಶಂಕರನೇ, ನೀನೇ ನನಗೆ ಆಸರೆ.

**ವಿದಿತಾ ನ ಮಯಾ ವಿಶದೈಕಕಲಾ**
**ನ ಚ ಕಿಂಚನ ಕಾಂಚನಮಸ್ತಿ ಗುರೋ ।**
**ದ್ರುತಮೇವ ವಿಧೇಹಿ ಕೃಪಾಂ ಸಹಜಾಂ**
**ಭವ ಶಂಕರದೇಶಿಕ ಮೇ ಶರಣಮ್ ॥ ೮ ॥**

ನನ್ನಲ್ಲಿ ನಿರ್ಮಲವಾದ ಶುದ್ಧಜ್ಞಾನದ ಒಂದೇ ಒಂದು ಅಂಶವೂ ಇಲ್ಲ. ಸ್ವಲ್ಪವೂ ಸಂಪತ್ತು ನನ್ನಲ್ಲಿಲ್ಲ. ಗುರುವೇ, ಬೇಗನೆ ನಿನ್ನ ಸಹಜ ಸ್ವಭಾವವಾಗಿರುವ ಕೃಪೆಯನ್ನು ನನ್ನ ಮೇಲೆ ಹರಿಸು. ನನಗೆ ನೀನೇ ದಿಕ್ಕು. ಶಂಕರ ಗುರುವೇ, ನೀನೇ ನನಗೆ ಆಸರೆ.

— ತೋಟಕಾಚಾರ್ಯ